ಇ) ರೂ 8 00 ಲಕ್ಷಗಳನ್ನು ಕಾಯ್ದಿರಿಸಲಾಗಿದೆ

326 (656) ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಹೆಚ್ಚು ಮಳೆಯಾಗುವುದರಿಂದ ರಸ್ತೆ ಮತ್ತು ಸೇತುವೆಗಳ ನಿರ್ಮಾಣಕ್ಕಾಗಿ ಪ್ರತ್ಯೇಕ ರಸ್ತೆ ನಿಧಿ ಸ್ಥಾಪಿಸಬೇಕೆಂಬ ನಂಜುಂಡಪ್ಪ ವರದಿಯಲ್ಲಿ ತಿಳಿಸಿರುವುದು ಸರ್ಕಾರಕ್ಕೆ ಗೊತ್ತಿದೆಯೇ,

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು ಮತ್ತು ಕೈಗೊಂಡ ಕ್ರಮವೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು

ಆ) ಕೊಡಗು ಜಿಲ್ಲೆಯ 410 24 ಕಿಮೀ ಉದ್ದದ ರಾಜ್ಯ ಹೆದ್ದಾರಿಯನ್ನು ರೂ 1592 66 ಲಕ್ಷ ಮೊತ್ತ ಅಂದಾಜಿನಲ್ಲಿ 3 ವರ್ಷಗಳ ನಿರ್ವಹಣೆಯನ್ನು (2005–2008) ಕೈಗೆತ್ತಿಕೊಳ್ಳಲಾಗಿದೆ 2006–07ನೇ ಸಾಲಿಗೆ ಕೊಡಗು ಜಿಲ್ಲೆಯ 807 00 ಕಿಮೀ ಉದ್ದದ ಜಿಲ್ಲಾ ಮುಖ್ಯ ರಸ್ತೆಯ ದುರಸ್ತಿ ನಿರ್ವಹಣೆ ಅಭಿವೃದ್ಧಿಗಾಗಿ ಲೆಕ್ಕ ಶೀರ್ಷಿಕೆ 3054–12ನೇ ಹಣಕಾಸು ಅಡಿಯಲ್ಲಿ ರೂ 307 20 ಲಕ್ಷ ಮತ್ತು ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ

327 (657) ಶ್ರೀ ಬೋಪಯ್ಯ ಕೆ ಜಿ (ಮಡಿಕೇರಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಮಡಿಕೇರಿ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸಲ್ಲಿಸಲಾಗಿರುವ ಪ್ರಸ್ತಾವನೆಗಳೆಷ್ಟು,

ಆ) ಈ ಯೋಜನೆಯಡಿ ಬಿಡುಗಡೆಯಾಗಿರುವ ಹಣ ಎಷ್ಟು (ವಿವರ ಗಳನ್ನು ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಮಡಿಕೇರಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸಲ್ಲಿಸಲಾಗಿರುವ ಪ್ರಸ್ತಾವನೆಗಳ ವಿವರ ಈ ಕೆಳಕಂಡಂತಿದೆ

ಕ್ರ. ಸಂ	ವರ್ಷ	ಕಾಮಗಾರಿಗಳ ಹೆಸರು	ಷರಾ
1	2003–04	ಮಡಿಕೇರಿ ಜಿಲ್ಲೆಯ ಶನಿವಾರಸಂತೆ–ಗೋಪಾಲಪುರ–ಬಾನವಾರ ರಸ್ತೆ ಕಿಮೀ 0 00 ರಿಂದ ಕಿಮೀ 4 80 ವರೆಗೆ ರಸ್ತೆ ಅಭಿವೃದ್ಧಿ (ಆಯ್ದಭಾಗಗಳಲ್ಲಿ)	ಕಾಮಗಾರಿಯು ಪೂರ್ಣ ಗೊಂಡಿದೆ
2	2004–05	ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಭಾಗಮಂಡಲದಿಂದ ತಲಕಾವೇರಿ ರಸ್ತೆ (ಆಯ್ದಭಾಗಗಳಲ್ಲಿ) ಕಿಮೀ 0 00 ರಿಂದ 8 20 ವರೆಗೆ	ಪ್ರಗತಿಯಲ್ಲಿದೆ
3	2006–07	ಕೊಡಗು ಜಿಲ್ಲೆಯ ರಾಜ್ಯ ಹೆದ್ದಾರಿ ಮಡಿಕೇರಿ ದಿಂದ ಭಾಗಮಂಡಲ ರಸ್ತೆ ' ಸುಧಾರಣೆ–ಕಿಮೀ 15 00 ರಿಂದ ಕಿಮೀ 27 80 ರವರೆಗೆ (ಮಡಿಕೇರಿ ಕ್ಷೇತ್ರ)	ಹೊಸ ಕಾಮಗಾರಿ

ಆ) ಕೇಂದ್ರ ರಸ್ತೆ ನಿಧಿ ಯೋಜನೆಯಡಿ ಬಿಡುಗಡೆಯಾಗಿರುವ ಹಣದ ವಿವರ ಈ ಕೆಳಕಂಡಂತಿದೆ,

ಕ್ರ. ಸಂ	ವರ್ಷ	ಕಾಮಗಾರಿಗಳ ಸಂಖ್ಯೆ	ಮಂಜೂರಾದ ಬಿಡುಗಡೆಯಾದ ಹಣ (ರೂ ಲಕ್ಷಗಳಲ್ಲಿ)
1	2003–04	1	60 00
2	2004–05	2	50 00
3	2006–07	1	70 00